ಸಂದರ್ಶನ: ಎನ್.ಎ.ಎಂ. ಇಸ್ಮಾಯಿಲ್,
ಪದ್ಮನಾಭ ಭಟ್



# ಬದಲಾಗದ ಬಾವಿ ನೀರು ಮತ್ತು ಬದಲಾಗಿರುವ ಊರು...

- ನಿಮ್ಮ ಬಾಲ್ಯಕಾಲದ ಕರಾವಳಿ ಬದುಕು ನಿಮ್ಮ ಕಥೆಗಳಲ್ಲಿ ಉಳಿದೆಲ್ಲ ಅನುಭವಗಳಿಗಿಂತ ಹೆಚ್ಚು ದಟ್ಟವಾಗಿ ಕಾಣಿಸುತ್ತದೆ. ಆ ಬಾಲ್ಯದ ಬಗ್ಗೆ ಹೇಳಿ.

ನಾನು ಹುಟ್ಟಿದ್ದು ಬಾರ್ಕೂರಿನಲ್ಲಿ. ಬಾರ್ಕೂರು ನನ್ನ ಮೇಲೆ ಬಹಳ ಪ್ರಭಾವ ಬೀರಿದೆ. ಹಾಗೆಯೇ ಕಟ್ಪಾಡಿಯ ಕೋಟೆಗ್ರಾಮದಲ್ಲಿ ನಾವಿದ್ದ ಸ್ಥಳ ನನ್ನ ಮೇಲೆ ಅತೀವ ಪ್ರಭಾವ ಬೀರಿದೆ, ದಟ್ಟ ಅನುಭವಗಳನ್ನೂ ಕೊಟ್ಟಿವೆ. ಅಲ್ಲಿನ ಸುಮಾರು ಮುನ್ನೂರು ಮನೆಗಳ ಪೈಕಿ ಮೂರು ಮನೆಗಳು ಮಾತ್ರ ಮುಸ್ಲಿಮರದ್ದು. ನಮ್ಮ ಮನೆಯವರೆಲ್ಲರೂ ಧರ್ಮನಿಷ್ಠ ಸಂಪ್ರದಾಯವಾದಿಗಳು. ಊರಿನಲ್ಲಿ ಬಹಳ ಬೆರೆತುಕೊಂಡು ಇದ್ರು. ನಮ್ಮ ಸುತ್ತಮುತ್ತ ಇರುವವರಲ್ಲಿ ಹೆಚ್ಚಾಗಿ ಹಿಂದೂಗಳು; ಅದರಲ್ಲಿಯೂ ಕೆಳಜಾತಿಯವರು. ಮೇಲ್ಜಾತಿಯವರೂ ಇದ್ದರು; ಸಂಖ್ಯೆ ಕಡಿಮೆ. ಮೊಗವೀರರು ಬಿಲ್ಲವರು ಜಾಸ್ತಿ.